Form No.4 (Civil)
Deposition
Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 7/2021

ಪ್ರಾ.ಸಾ. 1 ಚಾ.ಸಾ 1

| | | |
|---|---|---|
| ಹೆಸರು | : | ಮಲ್ಲಿಕಾರ್ಜುನ |
| ತಂದೆಯ ಹೆಸರು | : | ನಿಂಗನಗೌಡ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಕುರುಕುಂದಾ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 07-03-2026
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ಆರೋಪಿತರ ಪರಿಚಯ ಇರುತ್ತದೆ. ಚಾಸಾ-4 ರಿಂದ 10 ರವರ ಪರಿಚಯ ಇರುತ್ತದೆ. ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಘಟನೆ ನಡೆದಿರುವುದಿಲ್ಲ. ಪೊಲೀಸರಿಗೆ ಯಾವುದೇ ದೂರು ನೀಡಿರುವುದಿಲ್ಲ. ಸಾಕ್ಷಿದಾರರಿಗೆ ದೂರು ತೋರಿಸಲಾಗಿದ್ದು ಅದನ್ನು **ನಿ.ಪಿ.1** ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.1(ಎ)** ಎಂದು ಗುರುತಿಸಲಾಯಿತು. ನಿ.ಪಿ.1 ರಲ್ಲಿ ಏನು ಬರೆದಿರುತ್ತೆ ಎಂದು ನನಗೆ ಗೊತ್ತಿರುವುದಿಲ್ಲ. ಪೊಲೀಸರು ನನ್ನನ್ನು ಕರೆಯಿಸಿ ನನ್ನ ಸಮಕ್ಷಮ ಕೃತ್ಯ ನಡೆದ ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಮತ್ತು ಯಾವುದೇ ಪುರವಣಿ ಹೇಳಿಕೆ ನೀಡಿರುವುದಿಲ್ಲ.

(**ಈ ಸಂದರ್ಭದಲ್ಲಿ ಮಾನ್ಯ ಪಿಪಿರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.**)

**ಪಾಟೀ ಸವಾಲು: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:**

2. ದಿ: 14.05.2020 ರಂದು ಮಧ್ಯಾಹ್ನ 2.00 ಗಂಟೆಗೆ ಗ್ರಾಮ ಕುರುಕುಂದಾ ಪಂಚಾಯಿತಿಯಲ್ಲಿ ನಾನು ಇದ್ದಾಗ ಬಿಲಕಲೆಕ್ಟರಾದ 1ನೇ ಆರೋಪಿತನ ನಡುವೆ 2019-2020 ನೇ ಸಾಲಿನ ಮುಟೇಶನ ಹಾಗೂ ಕರವಸೂಲಿ ಕುರಿತು ಬಾಯಿ ಮಾತಿನ ಜಗಳವಾಯಿತು ಎಂದರೆ ಸರಿಯಲ್ಲ.

ಅದೇ ದಿನ ಮಧ್ಯಾಹ್ನ 3.00 ಗಂಟೆಗೆ ನಾನು ಮನಯಲ್ಲಿ ಇದ್ದಾಗ ಆರೋಪಿತರೆಲ್ಲರೂ ಅಕ್ರಮ ಕೂಟ ರಚಿಸಿಕೊಂಡು ಕೈಯಲ್ಲಿ ಕಲ್ಲು, ಬಡಿಗೆ ಹಿಡಿದುಕೊಂಡು ಅವಾಚ್ಯ ಶಬ್ದಗಳಿಂದ ಬೈದು, ನನ್ನನ್ನು ಕಳಗೆ ಹಾಕಿ ಕಾಲಿನಿಂದ ಒದ್ದು, ಬೆನ್ನಿಗೆ, ಹೊಟ್ಟೆಗೆ ಗುದ್ದಿ ಒಳಪೆಟ್ಟು ಮಾಡಿದರು ಎಂದರೆ ಸರಿಯಲ್ಲ. ಬಿಡಿಸಲು ಚಾಸಾ-4 ನನ್ನ ತಂದೆ 3ನೇ ಆರೋಪಿತನು ಕಟ್ಟಿಗೆಯಿಂದ ಬಲಗೈ ರಟ್ಟೆಗೆ ಹೊಡೆದು ಗಾಯಪಡಿಸಿದನು ಎಂದರೆ ಸರಿಯಲ್ಲ. ನನ್ನ ತಮ್ಮ ಚಾಸಾ-5 ರವರಿಗೆ 4ನೇ ಆರೋಪಿತನು ಹಿಡಿದುಕೊಂಡಾಗ 5ನೇ ಆರೋಪಿತನು ಬಡಿಗೆಯಿಂದ ತಲೆಗೆ ಹೊಡೆದು ರಕ್ತಗಾಯ ಪಡಿಸಿದನು ಎಂದರೆ ಸರಿಯಲ್ಲ. ಬಿಡಿಸಲು ಬಂದ ನನ್ನ ತಾಯಿ ಚಾಸಾ-6 ರವರಿಗೆ 6ನೇ ಆರೋಪಿತನು ಜಾಡಿಸಿ ನುಗಿಸಿಕೊಟ್ಟನು ಎಂದರೆ ಸರಿಯಲ್ಲ. 10 ನೇ ಆರೋಪಿತನು ಹಿಡಿಗಲ್ಲಿನಿಂದ ಎಡಗಾಲ ತೊಡೆಗೆ ಗಾಯಪಡಿಸಿದನು ಎಂದರೆ ಸರಿಯಲ್ಲ. ಆಗ ಚಾಸಾ-7 ರಿಂದ 10 ರವರು ಜಗಳ ಬಿಡಿಸಿಕೊಂಡರು ಎಂದರೆ ಸರಿಯಲ್ಲ. ನಂತರ ಆರೋಪಿತರೆಲ್ಲರೂ ಅವಾಚ್ಯ ಶಬ್ದಗಳಿಂದ ಬೈದು ಪಂಚಾಯಿತಿಯ ಲೆಕ್ಕ ಪತ್ರ ಅಂತಾ ಕೇಳಲು ಬಂದರೆ ನಿಮ್ಮನ್ನು ಖಲಾಸ ಮಾಡುತ್ತೇವೆ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ನಾನು ನಿ.ಪಿ.1 ರಂತೆ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

3. ದಿಃ 15.05.2020 ರಂದು ಪೊಲೀಸರು ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಘಟನಾ ಸ್ಥಳಕ್ಕೆ ಬಂದಾಗ ನಾನು ಸ್ಥಳದಲ್ಲಿ ಹಾಜರು ಇದ್ದು ಸ್ಥಳವನ್ನು ತೋರಿಸಿ ಸ್ಥಳದಲ್ಲಿ ಇದ್ದ ಎರಡು ಕಟ್ಟಿಗೆ ಮತ್ತು ಒಂದು ಹಿಡಿಗಾತ್ರ ಕಲ್ಲುಗಳನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

4. ದಿಃ 28.05.2020 ರಂದು ಫಿರ್ಯಾದಿಗೆ ಪೂರಕವಾಗಿ ಪುರವಣಿ ಹೇಳಿಕೆ ಕೊಟ್ಟಿದ್ದೇನೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಪುರವಣಿ ಹೆಳಿಕೆಯನ್ನು **ನಿ.ಪಿ.2** ಎಂದು ಗುರುತಿಸಲಾಯಿತು.

5. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ

- ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

ಮರುವಿಚಾರಣೆಃ-ಇಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.